**ಸಿಸಿ ನಂ. 536/2022**

**ಸಿ.ಡಬ್ಲೂ–7 ಪಿ.ಡ್ಲೂ:2**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ ನ್ಯಾಯಾಲಯ, ಸಿಂದಗಿ.**

| | | |
|---|---|---|
| ಸಾಕ್ಷಿದಾರನ ಹೆಸರು | : | ಅಂಬರೀಷ ವಾರದ |
| ತಂದೆ ಹೆಸರು | : | ಬಸಪ್ಪ |
| ವಯಸ್ಸು | : | 23 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸ ಸ್ಥಳ | : | ಕೊರಳ್ಳಿ |

ದಿನಾಂಕ 28–10–2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರಕಾರಿ ಸಹಾಯಕ ಅಭಿಯೋಜಕ ರವರಿಂದ.**

1. ಚಾ.ಸಾ. 1 ನನ್ನ ಮಾವ. ಚಾಸಾ 8 ರಿಂದ 12 ರವರ ಪರಿಚಯ ಇದೆ. ಆರೋಪಿತರ ಪರಿಚಯ ಇದೆ. 2020 ರಲ್ಲಿ ಒಂದು ದಿನ ನಾನು ಹೊಲದಲ್ಲಿದ್ದಾಗ ಮದ್ಯಾಹ್ನ 3–30 ಗಂಟೆಗೆ ಚಾಸಾ 1 ರವರು ನನಗೆ ಪೊನ್ ಮಾಡಿ ಹೂವಿನ ಹಳ್ಳಿ ಬಸ್ ನಿಲ್ದಾಣಕ್ಕೆ ಬರುವಂತೆ ಹೇಳಿರುತ್ತಾರೆ. ನಾನು ಬೈಕ್ ಮೇಲೆ ಹೂವಿನ ಹಳ್ಳಿ ಬಸ್ ನಿಲ್ದಾಣಕ್ಕೆ ಬಂದಿರುತ್ತೇನೆ. ನಂತರ ನಾನು ಮತ್ತು ಚಾಸಾ 1 ರವರು ಸೇರಿ ಬೈಕ್ ಮೇಲೆ ಆಲಮೇಲ್ ಕೆ ಹೋಗಿ ಚಾಸಾ 1 ರವರ ಪರಿಚಯಸ್ಥರ ಕಡೆಯಿಂದ ರೂ. 6,00,000/– ಹಣವನ್ನು ಪಡೆದುಕೊಂಡು ಆಹೇರಿ ಕ್ರಾಸ್ ಗೆ ಬಂದಿರುತ್ತೇವೆ. ನಂತರ ನನ್ನ ಮಾವನಿಗೆ ಇಲ್ಲಿಗೆ ಎಕೆ ಕರೆದುಕೊಂಡು ಬಂದ್ದಿದಿರಿ ಎಂದು ಕೇಳಿದಾಗ, ಆರೋಪಿ ನಂ.1 ರವರು ಇಲ್ಲಿಗೆ ಬರುತ್ತಾರೆ, ರೂ. 6 ಲಕ್ಷ ಹಣವನ್ನು ಕೇಳಿದ್ದಾರೆ ಬಂಗಾರವನ್ನು ಕೊಡುತ್ತೇನೆ ಎಂದು ಹೇಳಿದ್ದಾರೆ ಎಂದು ನನ್ನ ಮುಂದೆ ಹೇಳಿದರು.

2. ನಂತರ ಆರೋಪಿತರು ನಮಗೆ ಫೊನ್ ಮಾಡಿದ್ದು ನಾವು ಆಹೇರಿ ಕ್ರಾಸ್ ಗೆ ಬಂದಿರುವುದಾಗಿ ಹೇಳಿರುತ್ತೇವೆ. ನಂತರ ಆರೋಪಿತರು ಬಂಗಾರ ನಮ್ಮ ಬಳಿ ಇದೆ, ನೀವು ಇಬ್ಬರು ಬೈಕ್ ಮೇಲೆ ಬರುವವರ ಕೈಯಲ್ಲಿ ಹಣವನ್ನು ಕೋಡಿ ಎಂದು ಹೇಳಿರುತ್ತಾರೆ. ಅಷ್ಟರಲ್ಲಿ ಇಬ್ಬರು ವ್ಯಕ್ತಿಗಳು ಬೈಕ್ ಮೇಲೆ ಬಂದಿರುತ್ತಾರೆ. ನಂತರ ನಾವು ಆರೋಪಿತರಿಗೆ ಪೋನ್ ಮಾಡಿ ನಮ್ಮ ಬಳಿಗೆ ಬಂದಿರುವ ವ್ಯಕ್ತಿಗಳು ಆರೋಪಿತರು ಕಳುಹಿಸಿರುವ ವ್ಯಕ್ತಿಗಳು ಖಚಿತ ಪಡಿಸಿಕೊಂಡಿರುತ್ತೇವೆ. ಆರೋಪಿತರು ಹೇಳಿದ ಮೇರೆಗೆ ರೂ. 6 ಲಕ್ಷವನ್ನು ಬೈಕ್ ಮೇಲೆ ಬಂದಿರುವ ವ್ಯಕ್ತಿಗಳಿಗೆ ಕೊಟ್ಟಿರುತ್ತೇವೆ. ನಂತರ ಆರೋಪಿತ ಸಂಗನ ಬಸು ರವರು ನಮ್ಮ ಬಳಿಗೆ ಬಂದಿರುತ್ತಾರೆ, ಆದರೆ ನಮಗೆ ಬಂಗಾರವನ್ನು ಕೊಟ್ಟಿರುವುದಿಲ್ಲ.

3. ನಂತರ ಚಾಸಾ 1 ಮತ್ತು ಆರೋಪಿತರು ಕಾರನಲ್ಲಿ ಸಿಂದಗಿಗೆ ಬಂದಿರುತ್ತಾರೆ. ನಾನು ನನ್ನ ಬೈಕ್ ಮೇಲೆ ಸಿಂದಗಿಗೆ ಬಂದಿರುತ್ತೇನೆ. ಆಗ ಸಮಯ ಸಂಜೆ 7–30 ರಿಂದ 8–00 ಗಂಟೆ ಆಗಿತ್ತು. ಈ ಬಗ್ಗೆ ಚಾಸಾ 1 ರವರು ದೂರನ್ನು ನೀಡಿರುತ್ತಾರೆ. ನಾನು ಪೊಲೀಸರ ಮುಂದೆ ಈ ಬಗ್ಗೆ ಹೇಳಿರುತ್ತೇನೆ. ಪೊಲೀಸರು ನಂತರ ನನ್ನನ್ನು ಠಾಣೆಗೆ ಕರೆಯಿಸಿದ್ದರು. ಬೈಕ್ ಮೇಲೆ ಬಂದು ಹಣ ತೆಗೆದುಕೊಂಡು ಹೊದ ವ್ಯಕ್ತಿಗಳನ್ನು ತೋರಿಸಿ ಅವರ ಹೆಸರು ಓಂಕಾರ ಮತ್ತು ಮೌನೇಶ ಎಂದು ತಿಳಿಸಿರುತ್ತಾರೆ. ಈ ಬಗ್ಗೆ ನಾನು ಮರು ಹೇಳಿಕೆಯನ್ನು ನೀಡಿರುತ್ತೇನೆ.

**ಸಿಸಿ ನಂ. 536/2022**

**ಸಿ.ಡಬ್ಲೂ–7 ಪಿ.ಡ್ಲೂ:2**

**ಪಾಟೀ ಸವಾಲು: ಶ್ರೀಮತಿ. ಬಿ ಜಿ ಮ್ ಆರೋಪಿ ಪರ ವಕೀಲರಿಂದ**

4. ಚಾಸಾ 1 ರವರಿಗೆ ಆರೋಪಿತರು ಯಾವ ಫೋನ್ ನಂಬರನಿಂದ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾ 1 ರವರು ಹೇಳಿದ್ದರಿಂದ ಆರೋಪಿ ನಂ.1 ರವರು ಚಾಸಾ 1 ರವರಿಗೆ ಫೋನ್ ಮಾಡಿದ ವಿಚಾರ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿ. ಆರೋಪಿತರು ನನಗೆ ಫೋನ್ ಮಾಡಿಲ್ಲ ಮತ್ತು ನನ್ನ ಫೋನ್ ನಿಂದ ಆರೋಪಿತರಿಗೆ ನಾವು ಫೋನ್ ಮಾಡಿಲ್ಲ. ನಾನು ಉಚಿತ ನಾವದಗಿಯಿಂದ ನಾನು ಹೂವಿನ ಹಳ್ಳಿ ಬಸ್ಸ ನಿಲ್ದಾಣಕ್ಕೆ ಬಂದು ಚಾಸಾ 1 ರವರನ್ನು ಕರೆದುಕೊಂಡು ಆಲಮೇಲಗೆ ಹೊಗಿದ್ದೇವು. ಉಚಿತ ನಾವದಗಿಯಿಂದ ಹೂವಿನ ಹಳ್ಳಿಗೆ ಬರಲು 15 ನಿಮಿಷದಲ್ಲಿ ಬರಬಹುದು ಆಗಿದೆ. ಚಾಸಾ 1 ರವರು ಆಲಮೇಲದಲ್ಲಿ ಅವರ ಪರಿಚಯಸ್ಥರಿಂದ ಪಡೆದ ರೂ. 6 ಲಕ್ಷವು 6 ಬಂಡಲ್ ನೋಟ್ ಗಳಾಗಿದ್ದು.

5. ಯಾವ ಯಾವ ಮುಖ ಬೆಲೆಯ ಬಂಡಲಗಳು ಎಷ್ಟು ಇದ್ದು ಎಂದು ನನಗೆ ಗೊತ್ತಿಲ್ಲ. ನಾವು ಹೊದಾಗ ನಮ್ಮ ಚಾಸಾ 1 ರವರ ಪರಿಚಯಸ್ಥರು ಹಣವನ್ನು ಎಣಿಸಿ ಕೊಟ್ಟಿರುತ್ತಾರೆ. ಸದರಿ ಹಣವನ್ನು ತೆಗೆದುಕೊಂಡು ಬರುವಾಗ ಮದ್ಯಾಹ್ನ 2–00 ಗಂಟೆ ಆಗಿತ್ತು. ಸಂಜೆ 4–00 ರಿಂದ 4–30 ಗಂಟೆ ಸುಮಾರಿಗೆ ಆಹೇರಿಗೆ ಹೊಗಿದ್ದೇವು. ರಾತ್ರಿ 7–30 ಗಂಟೆಗೆ ಬೈಕ್ ಮೇಲೆ ಇಬ್ಬರು

ಹುಡುಗರು ಬಂದಿದ್ದರು. ಚಾಸಾ 1 ರವರು ಯಾರಿಗೆ ಫೋನ್ ಮಾಡಿದ್ದಾರೆ ಎಂದು ನಾನು ಕೇಳಿದ್ದು ಆರೋಪಿ ನಂ.1 ರವರಿಗೆ ಫೋನ್ ಮಾಡುವುದಾಗಿ ಹೇಳಿರುತ್ತಾರೆ. ಹಣವನ್ನು ಕೊಡುವಾಗ ರಾತ್ರಿಯಾಗಿತ್ತು ಎಂದರೆ ಸರಿ. ಅವರಿಗೆ ನಾವು ಹಣವನ್ನು ಎಣಿಸಿ ಕೊಡಲಿಲ್ಲ ಎಂದರೆ ಸರಿ. ಕತ್ತಲಾದ್ದರಿಂದ ಹಣವು ಕಾಣುತ್ತಿರಲಿಲ್ಲ ಮತ್ತು ಸದರಿ ವ್ಯಕ್ತಿಗಳ ಮುಖವು ಕಾಣುತ್ತಿರಲಿಲ್ಲ ಎಂದರೆ ಸರಿ. ಚಾಸಾ 1 ರವರು ನನ್ನ ಮಾವ ಆಗಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಹಣದ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಮಾವ ಸೇರಿ ಸುಳ್ಳು ಹೇಳುತ್ತಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಬಂಗಾರವನ್ನು ಕೊಡುತ್ತೇವೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇಲ್ಲ.**

(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಹಿರಿಯ ಸಿವ್ಹಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಪ್.ಸಿ.
ಸಿಂದಗಿ